ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ಬಂದು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಅಲ್ಲಿನ ಸ್ಥಳೀಯ ಪುರಸಭೆಯವರು ಗಮನಹರಿಸಿ ತಮ್ಮ ಮನೋಭಾವವನ್ನು ಕರ್ನಾಟಕ ನೀರು ಸರಬರಾಜು ಮಂಡಲಿಗೆ ತಿಳಿಸುವಂತೆ ಅವರಿಗೆ ಮನವಿಯನ್ನು ಕಳುಹಿಸಬೇಕು. ಜೊತೆಗೆ ಅವರು ತಮ್ಮ ಪಂಪಿಗೆಯನ್ನು ಕೊಡುವುದಕ್ಕೆ ಸಿದ್ಧರಾಗಿರಬೇಕು. ಆನಂತರ ಅದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಪಟ್ಟಣಕ್ಕೆ ಕುಡಿಯುವ ನೀರಿನ ಬಗ್ಗೆ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ೧೯೮೬-೮೭ಕ್ಕೆ ಆ ಯೋಜನೆಯನ್ನು ಸೇರಿಸಿಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಮುಂದಿನ ಗಮನ ಸೆಳೆಯುವ ಸೂಚನೆಯನ್ನು ನಿಯಮ ೩೫೪ರ ಪ್ರಕಾರ ಬಂದಿರುವ ಸೂಚನೆಗಳನ್ನು ತೆಗೆದುಕೊಂಡ ನಂತರ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ನಿಯಮ ೩೫೪ರ ಮೇರೆಗೆ

(೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಲ ಕೊರೆತಕ್ಕೆ ತಡೆಗೋಡೆ ರಚಿಸುವುದು

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯು ಕರಾವಳಿಯಾದ್ದಕ್ಕೂ ಕಡಲ ಕೊರೆತ, ಪ್ರವಾಹದ ಹಾನಿ, ಅನೇಕ ವರ್ಷಗಳಿಂದ ನಡೆದಿದ್ದು, ತಡೆಗೋಡೆ ರಚಿಸಬೇಕೆಂಬ ಜನತೆಯ ಕೂಗು ಕಡಲ ಕೊರೆತದಂತೆ ಅವಿಶ್ರಾಂತವಾಗಿ ಕೇಳುತ್ತಿದ್ದರೂ, ಆ ಆಕ್ರಂದನಕ್ಕೆ ಕರ್ನಾಟಕ ಸರ್ಕಾರ ಇನ್ನೂ ಎಚ್ಚೆತ್ತಿಲ್ಲ. ಕೊರೆತ ತೀವ್ರವಾದಲ್ಲಿ ಒಂದಿಷ್ಟು ಕಲ್ಲು ಸುರಿದು ತಾತ್ಕಾಲಿಕ ಉಪಶಮನ ಮಾಡಲಾಗುತ್ತದೆ. ಮುಂದಿನ ವರ್ಷ ಬಂದಾಗ ಆ ಕಲ್ಲೆಲ್ಲ ಪುನಃ ಕಡಲ ಪಾಲು. ಪುನಃ ಕಡಲ ಕೊರೆತ. ಪುನಃ ಜನತೆಯ ಆಕ್ರಂದನ. ಶಾಶ್ವತ ರಕ್ಷಣಾ ವ್ಯವಸ್ಥೆ ಮಾಡುವೆವೆಂದ ಸರ್ಕಾರದ ಭರವಸೆಯೂ ಕಡಲ ಪಾಲಾಯಿತೇ? ಸತ್ಯಕ್ಕೆ ದೂರವಾದ ಪೊಳ್ಳು ಭರವಸೆಗಳಿಂದ ಜನ ರೊಚ್ಚಿಗೆದ್ದು ಕರಾವಳಿಯುದ್ದಕ್ಕೂ ಜಿಲ್ಲಾ ಪರಿಷತ್ ನಂಡಲ ಪಂಚಾಯತ್ ಚುನಾವಣೆಗಳಲ್ಲಿ ಸ್ಪಷ್ಟ ಸೂಚನೆ ನೀಡಿದ್ದಾರೆ. ಇನ್ನಾದರೂ ಕಾರ್ಯಪ್ರವೃತ್ತರಾಗಿ ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳಿಂದ ವರದಿ ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ರೀತಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟು ನಮ್ಮ ಸೂಚನೆಗಳಿಗೆ ಇನ್ನೂ ಉತ್ತರ ಕಳುಹಿಸಿಕೊಟ್ಟಿಲ್ಲ.

ಅಧ್ಯಕ್ಷರು.—ಅವರು ಉತ್ತರ ತರಿಸಿಕೊಡುತ್ತಾರೆ.

ಶ್ರೀ ಬಿ.ಎ. ಇದಿನಬ್ಬ.—ಯಾವಾಗ ತರಿಸಿಕೊಡುತ್ತಾರೆ?

ಅಧ್ಯಕ್ಷರು.—ಇದಕ್ಕಾಗಿಯೇ ಒಂದು ಭರವಸೆಗಳ ಸಮಿತಿ ಇದೆ. ಆ ಸಮಿತಿಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರು ಇರುತ್ತಾರೆ. ಶ್ರೀಮತಿ ಲೀಲಾದೇವಿ ಅವರೇ ಅವರ ಅಧ್ಯಕ್ಷರು. ಆ ಸಮಿತಿಯವರು ವಾರದಲ್ಲಿ ಎರಡು ದಿನ ಸಭೆ ಸೇರಿ ಇಂಥಾದ್ದನ್ನೆಲ್ಲಾ ಪರಿಶೀಲಿಸಿ ನೋಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಯು. ಭೂಪತಿ.—ಉತ್ತರ ತರಿಸಿಕೊಡುತ್ತೇನೆಂದು ಹೇಳಿದರೆ, ಅದು ಭರವಸೆ ಆಗುವುದಿಲ್ಲ.

ಅಧ್ಯಕ್ಷರು.—"due consideration, it will be looked into" ಇದೆಲ್ಲಾ ಭರವಸೆ ಆಗುತ್ತದೆ.

ಶ್ರೀ ಯು. ಭೂಪತಿ.—ಆದರೆ 'ಕಳುಹಿಸಿಕೊಡುತ್ತೇನೆ' ಎಂದರೆ ಭರವಸೆ ಆಗುವುದಿಲ್ಲ.

ಅಧ್ಯಕ್ಷರು.—ಈ ಬಗ್ಗೆ ನಿಮ್ಮೆಲ್ಲರ ಪರವಾಗಿ ನಾನೇ ನೋಡುತ್ತೇನೆ.